

ಸಂಪಾದಕೀಯ

# ಬುದ್ಧಿ, ಹೃದಯಗಳು ಒಂದಾದಾಗ ..

ಮಾನವನ ಗತಿಯನ್ನು ನಿರ್ಧರಿಸುವಲ್ಲಿ, ಅವನ ಸಾಧನೆ-ಸಿದ್ಧಿ-ಸಾರ್ಥಕ್ಯಗಳನ್ನು ನಿರ್ಣಯಿಸುವಲ್ಲಿ ಅವನ ಬುದ್ಧಿ ಅತ್ಯಗತ್ಯವಾದ ಅಂಶವೋ, ಅವನ ಹೃದಯವೇ ನಿರ್ಣಾಯಕ ಅಂಶವೋ—ಈ ಪ್ರಶ್ನೆ ತುಂಬ ಹಳೆಯದು. ಪ್ರಮುಖ ಚಿಂತಕರೆಲ್ಲ ಮಾನವನ ಈ ಎರಡು ಪ್ರಮುಖ ಗುಣ, ಸ್ವಭಾವಗಳನ್ನು ಕುರಿತು ಚಿಂತಿಸಿದ್ದಾರೆ. ಬಂಗಾಳದ ಪ್ರಸಿದ್ಧ ಅನುಭಾವಿ ಕವಿ ರಾಮಪ್ರಸಾದ ಜಗನ್ಮಾತೆಯ ಇರವನ್ನು ಕುರಿತು ಹೀಗೆ ಹಾಡುತ್ತಾನೆ:

**ಕುಬ್ಜನಾದವ ಮುಗಿಲ ಚಂದ್ರನ**
**ಹಿಡಿವ ಯತ್ನದ ತೆರದಲಿ**
**ಬುದ್ಧಿಯರಿತರು ಹೃದಯವರಿಯದು**
**ತಾಯಿ ದುರ್ಗೆಯ ನಿಜವನು ॥**

**ತಾಯಿ ದುರ್ಗೆಯ ನಿಜವನರಿಯುವ**
**ಧೀರರಾರೋ ಜಗದೊಳು ॥**

ಲೌಕಿಕ ಜೀವನದಲ್ಲೂ, ಪಾರಮಾರ್ಥಿಕ ಬದುಕಿನಲ್ಲೂ ಹೃದಯದ ಪಾರಮ್ಯವನ್ನು ಹೊಗಳುವ ಹಲವು ಮಾತುಗಳನ್ನು ನಾವು ಕೇಳುತ್ತೇವೆ. ಆದರೂ ಹಲವು ದರ್ಶನಗಳು ಮತ್ತು ಸಿದ್ಧಾಂತಗಳು ಜ್ಞಾನದ, ವಿವೇಕದ ಹಾಗೂ ಬುದ್ಧಿಯ ಮಹತ್ವವನ್ನು ಎತ್ತಿ ಹಿಡಿಯುತ್ತವೆ. ಈ ಎರಡೂ ವಾದಗಳು ಕೆಲವೊಮ್ಮೆ ತಮ್ಮ ಮಹತ್ವವನ್ನು ಹೇಳುವ ಭರದಲ್ಲಿ ಇನ್ನೊಂದನ್ನು ತೆಗಳಿದ್ದೂ ಇದೆ. ನಿಜವಾಗಿಯೂ ಈ ಎರಡು ಗುಣಗಳ ಸ್ವಭಾವವೇನು? ಇವುಗಳಲ್ಲಿ ಅತ್ಯಾವಶ್ಯಕ ಸಂಗತಿ ಯಾವುದು? ಇವು ಮಾನವನ ಏಳಿಗೆಗೆ ಯಾವ ರೀತಿಯಲ್ಲಿ ಸಹಾಯಕವಾಗುವುವು? ಇವೆರಡರ ಸಮನ್ವಯ, ಸಾಮರಸ್ಯ ಸಾಧ್ಯವೆ? ಇಂಥ ಸಂಗತಿಗಳನ್ನೀಗ ಚರ್ಚಿಸೋಣ.

## ಹೃದಯ : ಭಗವಂತನ ಸ್ಥಾನ

ಬುದ್ಧಿಗಿಂತ ಹೃದಯವೇ ಮುಖ್ಯವೆನ್ನಲು ಒಂದು ಮುಖ್ಯವಾದ ಕಾರಣವಿದೆ. ಭಗವಂತನು ಎಲ್ಲ ಜೀವಿಗಳ ಅಂತರಂಗದಲ್ಲಿ ಚೈತನ್ಯರೂಪದಲ್ಲಿ ನೆಲೆಸಿದ್ದಾನೆ ಎಂದು ಉಪನಿಷತ್ತು, ಗೀತೆ ಹಾಗೂ ಇತರ ವೇದಾಂತದ ಗ್ರಂಥಗಳು ಹೇಳುತ್ತವೆ. 'ಅಂತರಂಗದಲ್ಲಿ' ಎಂದರೆ ಹೃದಯದಲ್ಲಿ ಎಂದೂ ಕೆಲವೆಡೆ ವರ್ಣಿಸಲಾಗಿದೆ. ಭಕ್ತಿಯೇ ಪ್ರಧಾನವಾಗಿರುವ ಗ್ರಂಥಗಳಂತೂ ಭಗವಂತನು ಎಲ್ಲರ ಹೃದಯದಲ್ಲೇ ವಾಸಿಸುತ್ತಾನೆಂದೂ, ಭಕ್ತನ ಉಪಾಸನೆಗೆ ಒಲಿದು ಅವನು ವ್ಯಕ್ತವಾಗುವುದು ಹೃದಯದಲ್ಲೇ ಎಂದೂ ವಿವರಿಸುತ್ತವೆ. ಆದರೆ ಭಕ್ತಿಪರಂಪರೆ ಹೃದಯಕ್ಕೆ ಮಹತ್ವ ನೀಡಿರುವುದು ಈ ಶಾರೀರಿಕ ಅಂಶದಿಂದಾಗಿ ಅಲ್ಲ; ಮಾನಸಿಕ ಅಂಶದಿಂದಾಗಿ. ಭಗವಂತನನ್ನು ಸಮೀಪಿಸಲು ಅತ್ಯಗತ್ಯವಾದ ಭಕ್ತಿ ಉತ್ಪನ್ನವಾಗುವುದು ಹೃದಯದಲ್ಲಿ; ಹೀಗಾಗುವುದು ಭಾವಪೂರ್ಣವಾದ, ಪ್ರೇಮ ಹಾಗೂ ವ್ಯಾಕುಲತೆಗಳಿಂದ ಕೂಡಿದ ಕ್ರಿಯೆಗಳಿಂದ. ಆದ್ದರಿಂದ ಹೃದಯವಂತಿಕೆ, ಭಾವ ಅತ್ಯಂತ ಮುಖ್ಯವೆನ್ನಲಾಗಿದೆ.

ಯೋಗಸಾಧನೆಯಲ್ಲಿ ಸಾಧಕನು ಹೃದಯವನ್ನು ಒಂದು ಕಮಲದಂತೆ ಚಿಂತಿಸುವುದು, ಅದರಲ್ಲಿ ಪರಮಾತ್ಮನು ಕುಳಿತಿರುವಂತೆ ಕಲ್ಪಿಸಿಕೊಳ್ಳುವುದು ಕಂಡುಬರುತ್ತದೆ. ವಿವಿಧ ಪ್ರಜ್ಞಾಕೇಂದ್ರಗಳನ್ನು 'ಚಕ್ರ'ಗಳೆಂದು ಗುರುತಿಸುವ ತಂತ್ರಶಾಸ್ತ್ರದಲ್ಲೂ ಹೃದಯ ಪ್ರದೇಶ ಅತ್ಯಂತ ಮುಖ್ಯವಾದುದು. ಈ ಕಾರಣಗಳಿಂದಲೂ ಹೃದಯಕ್ಕೆ ಹೆಚ್ಚಿನ ಮಹತ್ವ ನೀಡಿರಬಹುದು.

ಆದರೆ ನಾವು ಚರ್ಚಿಸಬೇಕಾಗಿರುವ ವಿಷಯ ಕೇವಲ ಆಧ್ಯಾತ್ಮಿಕ ಕ್ಷೇತ್ರವನ್ನು ಮಾತ್ರ ಕುರಿತಾಗಿಲ್ಲ; ಲೌಕಿಕ ಜೀವನದಲ್ಲೂ, ಮಾನವನ ಸ್ವರೂಪ-ಸ್ವಭಾವಗಳಿಗೆ ಸಂಬಂಧಿಸಿದಂತೆಯೂ ಈ ಮಾನಸಿಕ ಗುಣಗಳ ವಿಚಾರವಾಗಿ ಜಿಜ್ಞಾಸೆ ನಡೆಯಬೇಕು. ಒಟ್ಟು ಮಾನವನ ವಿಕಾಸದಲ್ಲಿ ಬುದ್ಧಿ-ಹೃದಯಗಳು ಅಸಾಧಾರಣ ರೀತಿಯಲ್ಲಿ, ನಾನಾ ಹಂತಗಳಲ್ಲಿ ಅವನನ್ನು ಮುನ್ನಡೆಸಿವೆ. ಆದ್ದರಿಂದ ಬುದ್ಧಿ, ಹೃದಯ ಎಂದರೆ 'ತಲೆ ಮತ್ತು ಎದೆ' ಎಂದು ತೀರ ಸರಳೀಕರಣಗೊಳಿಸದೆ, ಇವೆರಡೂ ಮಾನವ ಸ್ವಭಾವದ ಎರಡು ಮಾನಸಿಕ ಕ್ರಿಯೆಗಳು ಎಂದು ತಿಳಿದುಕೊಳ್ಳಬೇಕು.

## ಮನಸ್ಸು : ಬುದ್ಧಿ, ಹೃದಯಗಳ ನೆಲೆ

ವೇದಾಂತದ ಪ್ರಕಾರ ಮನಸ್ಸು, ಬುದ್ಧಿ ಇವು ಬೇರೆ ಬೇರೆಯಲ್ಲ. ಮನಸ್ಸು ದೇಹದ ಭಾಗವಲ್ಲ; ಅದನ್ನು ಸೂಕ್ಷ್ಮ ಇಂದ್ರಿಯ ಅಥವಾ 'ಅಂತಃಕರಣ' ಎನ್ನಲಾಗಿದೆ. ಅದೇ ಅಂತಃಕರಣ ಆಲೋಚನೆಗಳಿಂದ ಕೂಡಿದಾಗ 'ಮನಸ್ಸು' ಎನ್ನಿಸಿಕೊಳ್ಳುತ್ತದೆ. 'ಇದು ಹೀಗೆ' ಎಂದು ನಿಶ್ಚಯಿಸುವಾಗಲೂ, ಎರಡರ ನಡುವೆ ಯಾವುದು ಸರಿ ಯಾವುದು

ತಪ್ಪು, ಯಾವುದು ಸತ್ಯ ಯಾವುದು ಸುಳ್ಳು, ಯಾವುದು ಯೋಗ್ಯ ಯಾವುದು ಅಯೋಗ್ಯ ಎಂದು ನಿರ್ಣಯಿಸುವಾಗಲೂ 'ಬುದ್ಧಿ' ಕೆಲಸ ಮಾಡುತ್ತದೆ. ಒಂದು ವಸ್ತುವಿನ, ವಿಷಯದ ಜ್ಞಾನವನ್ನು ಪ್ರಕಾಶಗೊಳಿಸುವುದು ಬುದ್ಧಿಯ ಕೆಲಸ. ಸದಾ ಮನಸ್ಸಿನ ಹಿನ್ನೆಲೆಯಲ್ಲಿ 'ನಾನು' ಎಂಬ ಭಾವವನ್ನು ಸ್ಫುರಿಸುವುದೇ 'ಅಹಂಕಾರ.' ಎಲ್ಲ ಆಲೋಚನೆಗಳು ಹೊರಡುವ, ಎಲ್ಲ ನೆನಪುಗಳು ಹಾಗೂ ಸಂಸ್ಕಾರಗಳಿಗೆ ಮೂಲವಾದ, ಮನಸ್ಸಿನ ಆಳದಲ್ಲಿರುವ ಅನುಭವಗಳ ಸಂಗ್ರಹಾಲಯವೇ 'ಚಿತ್ತ'. ಹೀಗೆ ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ—ಇವು ನಾಲ್ಕೂ ವಿಭಿನ್ನ ಕೆಲಸಗಳ ಕಾರಣದಿಂದ ನಾಲ್ಕು ಬಗೆಯಲ್ಲಿ ಕಂಡುಬಂದರೂ, ನಿಜವಾಗಿ ಇವೆಲ್ಲ ಒಂದೇ.

ಬುದ್ಧಿಯ ನೆಲೆ ಮನಸ್ಸು ಎಂದು ತಿಳಿದಂತಾಯಿತು. ಹೃದಯದ ನೆಲೆ ಯಾವುದು? ಹಿಂದೆ ನೋಡಿರುವಂತೆ, 'ಹೃದಯ'ವೆಂದು ಇಲ್ಲಿ ಹೇಳಿರುವುದು ಎಲಬುಗೂಡು, ರಕ್ತ ಮಾಂಸಗಳಿಂದ ಕೂಡಿರುವ ದೈಹಿಕ ಹೃದಯವಲ್ಲ; ಇದು ಭಾವನೆಗಳಿಂದ ಕೂಡಿರುವ ಮಾನಸಿಕ ವ್ಯಾಪಾರ. ಅದೂ ನೆಲೆಸಿರುವುದು ಮನಸ್ಸಿನಲ್ಲಿಯೇ; ತನ್ನ ಕ್ರಿಯೆಗಾಗಿ ಅದು ಆಲೋಚನೆ, ಬುದ್ಧಿ, ಚಿತ್ತ, ಅಹಂಕಾರ ಇವೆಲ್ಲವನ್ನೂ ಒಳಗೊಳ್ಳಬಹುದು. ಒಂದರ್ಥದಲ್ಲಿ ಇದು 'ಅಂತಃಕರಣ' ವೆನಿಸುವ ಮನಸ್ಸಿನ ಎಲ್ಲ ಕ್ರಿಯೆಗಳನ್ನೂ ವ್ಯಾಪಿಸುತ್ತದೆ. ಈ ಕಾರಣದಿಂದಲೂ ಹೃದಯವೇ ಎಲ್ಲಕ್ಕಿಂತ ಮುಖ್ಯವೆಂದು ಪರಿಗಣಿಸಿರುವ ಸಾಧ್ಯತೆಯಿದೆ.

### ಬುದ್ಧಿ, ಹೃದಯಗಳ ಕಾರ್ಯ ವಿಭಿನ್ನ

ಭಗವಂತನ ನಿಜವಾದ ಸ್ವರೂಪವೇನೆಂದು ವಿವರಿಸುವಾಗ 'ಅವನು ಜ್ಞಾನಮಯನು' ಎನ್ನಲಾಗಿದೆ. ಇದರಿಂದಾಗಿಯೇ ಅವನನ್ನು 'ಚಿನ್ಮಯ' (ಚಿತ್+ಮಯ, 'ಚಿತ್' ಎಂದರೆ ಚೈತನ್ಯ ಅಥವಾ ಜ್ಞಾನ; ಇದರಿಂದ ತುಂಬಿಕೊಂಡಿರುವವನೇ 'ಚಿನ್ಮಯ') ಎಂದೂ ಬುದ್ಧಿಯ ಆಳದಲ್ಲಿ ನೆಲೆಸಿರುವನು ಎಂದೂ ವರ್ಣಿಸಲಾಗಿದೆ. ಪ್ರತಿಯೊಂದು ವಸ್ತುವಿನ, ಪ್ರತಿಯೊಂದು ಜೀವಿಯ ಹಾಗೂ ಪ್ರತಿಯೊಬ್ಬ ವ್ಯಕ್ತಿಯ ಅಂತರಂಗದಲ್ಲಿರುವ ಚೈತನ್ಯದಲ್ಲಿ ಎಲ್ಲ ಜ್ಞಾನವೂ ಅಡಗಿದೆ; ಏಕೆಂದರೆ ಇವೆಲ್ಲವೂ ಅಖಂಡ-ಚೈತನ್ಯ-ರೂಪನಾದ ಭಗವಂತನ ಅಂಶಗಳು. ಹೀಗೆ ಅಂತರಂಗದಲ್ಲಿ ಅಡಗಿದ ಅಖಂಡ ಜ್ಞಾನವನ್ನು ಮಾನವನು ವಿವಿಧ ಪ್ರಯತ್ನಗಳಿಂದ ವಿಕಸನಗೊಳಿಸಬಹುದು. ವಿದ್ಯಾಭ್ಯಾಸ, ಬೌದ್ಧಿಕ ಚಟುವಟಿಕೆಗಳು, ಏಕಾಗ್ರತೆ-ಧ್ಯಾನವೇ ಮೊದಲಾದ ಸಾಧನೆಗಳಿಂದ ಈ ಅಖಂಡ ಜ್ಞಾನವು ವಿಕಾಸ ಹೊಂದಿದರೆ, ಮಾನವನಿಗೆ ತನ್ನ ಅಗಾಧ ಶಕ್ತಿಯ ಅರಿವಾಗುವುದು. ತನ್ನ ಶಕ್ತಿಗೆ, ಅರಿವಿಗೆ ಹಾಗೂ ಸಾಧನೆಗೆ ಯಾವ ಮಿತಿಯೂ ಇಲ್ಲ ಹಾಗೂ ತನಗೆ ಸಾಧಿಸಲಾಗದ ಕಾರ್ಯ ಯಾವುದೂ ಇಲ್ಲವೆಂಬ ಸತ್ಯ ಅವನಿಗೆ ಗೋಚರವಾಗುವುದು. ಅರಿತೋ, ಅರಿಯದೆಯೋ ಮಾನವನು ಸಾಧಿಸಿದ ಎಲ್ಲ ಪ್ರಗತಿಗೆ ಈ ಸುಪ್ತ ಅಖಂಡ ಜ್ಞಾನವೇ ಕಾರಣ. ಬುದ್ಧಿ ವ್ಯಕ್ತಗೊಳ್ಳುವುದು ಈ ರೀತಿ. ಯಾವುದೇ ವಸ್ತುವಿನ ಅಂತರಂಗವನ್ನು ಅರಿಯುವಂತೆ ಮಾಡುವುದು, ಜಗತ್ತಿನ ವಿವಿಧ ಕ್ರಿಯೆಗಳ ಹಿಂದಿರುವ ನಿಯಮಗಳನ್ನು ತಿಳಿಸಿಕೊಡುವುದು ಬುದ್ಧಿಯ ಕಾರ್ಯ.

ಮಾನವ ಎಲ್ಲ ಕ್ರಿಯೆಗಳ ಹಿಂದೆ ಇನ್ನೊಂದು ಸಂಗತಿ ಕೆಲಸ ಮಾಡುತ್ತದೆ. ಅದೇ ಭಾವ ಅಥವಾ ಭಾವನೆ. ಹಲವು ಬಗೆಯ ಸಂವೇದನೆ, ಸ್ಪಂದನ ಹಾಗೂ ತುಡಿತಗಳಿಂದ ಕೂಡಿದ ಹೃದಯದ ಕ್ರಿಯೆಯೇ ಈ ಭಾವನೆ. ಆಕರ್ಷಣೆ-ವಿಕರ್ಷಣೆ, ಪ್ರೀತಿ-ದ್ವೇಷ, ಮೋಹ-ತಿರಸ್ಕಾರ ಮೊದಲಾದ ವಿರುದ್ಧ ಭಾವನೆಗಳಿಂದಲೂ, ಕಾಮ, ಕ್ರೋಧಗಳೇ ಮೊದಲಾದ ಷಡ್ವಿಕಾರಗಳಿಂದಲೂ, 'ನಾನು', 'ನನ್ನದು' ಎಂಬ ಅಹಂಕೇಂದ್ರಿತ ಪ್ರಜ್ಞೆಯಿಂದಲೂ ಕೂಡಿ ಈ ಭಾವಗಳು ವರ್ತಿಸುತ್ತವೆ. ಎಲ್ಲ ಜ್ಞಾನ, ವಿದ್ಯಾಭ್ಯಾಸ, ಕಾರ್ಯಚಟುವಟಿಕೆ, ಸಾಮರ್ಥ್ಯ, ಹಲವು ಬಗೆಯ ಕೌಶಲ್ಯಗಳು - ಎಲ್ಲವೂ ಈ ಭಾವಗಳಿಂದ ನಿಯಂತ್ರಿತವಾಗುತ್ತವೆ. ಲೌಕಿಕಜೀವನ, ಸಮಾಜ, ವ್ಯಕ್ತಿಗತ ಆದರ್ಶ ಹಾಗೂ ಮಹತ್ವಾಕಾಂಕ್ಷೆಗಳು ಕೂಡ ಇಂತಹ ಭಾವ ವ್ಯಾಪಾರಗಳೊಂದಿಗೆ ಸೇರಿಕೊಂಡೇ ನಡೆಯುತ್ತವೆ. ವ್ಯಕ್ತಿಯೊಬ್ಬನ ಹೃದಯವೆಂತಹುದು ಎಂಬುದನ್ನು ಈ ಎಲ್ಲ ಅಂಶಗಳು ನಿರ್ಣಯಿಸುತ್ತವೆ. 'ಆಹಾ! ಅವನದು ಎಂಥ ಹೃದಯವಂತಿಕೆ!' 'ಇವನು ಹೃದಯಶೂನ್ಯ ವ್ಯಕ್ತಿ', 'ಕಲ್ಲು ಹೃದಯ ನಿನ್ನದು!' - ಎಂಬೀ ಮಾತುಗಳನ್ನು ಕೇಳುವಾಗಲೆಲ್ಲ ಇತರಿಗಾಗಿ ಮಿಡಿಯುವ, ಕಾಳಜಿ ವಹಿಸುವ, ಸ್ವಾರ್ಥವನ್ನು ಮೀರಿ ನಿಲ್ಲಬಲ್ಲ ವಿಶಾಲ ಹೃದಯದ ಗುಣ ನಮ್ಮಲ್ಲೆಲ್ಲ ಇರಬೇಕು ಎಂಬ ಆಶಯ ವ್ಯಕ್ತವಾಗುತ್ತದೆ. ವ್ಯಕ್ತಿಯ ಸ್ವಭಾವವನ್ನು ಇದು ನಿರ್ಣಯಿಸುವುದರಿಂದ, ಇದನ್ನು 'ಮಾನವೀಯತೆ', 'ಮಾನವತ್ವ' ಎಂದೂ ಕರೆಯುತ್ತೇವೆ. ಬುದ್ಧಿ ಮೆದುಳಿನ ಕ್ರಿಯೆಯೆಂದೂ, ಭಾವನೆ ಹೃದಯದ ಕ್ರಿಯೆಯೆಂದೂ ಸರಳವಾಗಿ ಹೇಳುವುದುಂಟು. ಅದರೆ, ಇವುಗಳ ಕಾರ್ಯ ಬೇರೆ ಬೇರೆಯಾದ್ದರಿಂದ, 'ಬುದ್ಧಿ ಜ್ಞಾನವನ್ನು ನೀಡುವುದು, ಹೃದಯ ವ್ಯಕ್ತಿತ್ವವನ್ನು ನೀಡುವುದು' ಎನ್ನಬೇಕು.

### ಜೀವನದ ವಿವಿಧ ಸ್ತರಗಳಲ್ಲಿ

ಮಾನವ ಜೀವನದ ವಿವಿಧ ಹಂತಗಳಲ್ಲಿ, ವಿಕಾಸದ ವಿವಿಧ ಸನ್ನಿವೇಶಗಳಲ್ಲಿ ಹಾಗೂ ಸಮಾಜಗಳ ವಿವಿಧ ಮಜಲುಗಳಲ್ಲಿ ಬುದ್ಧಿ, ಹೃದಯಗಳು ಹಲವು ಬಾರಿ ಒಂದಾಗಿ ಕೆಲಸ ಮಾಡಿವೆ; ಹಲವು ವೇಳೆ ಮುಖಾಮುಖಿಯಾಗಿ ಸಂಘರ್ಷಗಳಲ್ಲಿ ತೊಡಗಿವೆ. ಪಾಶ್ಚಾತ್ಯ ಪ್ರಪಂಚದಲ್ಲಿ ಧಾರ್ಮಿಕ ನಂಬಿಕೆಗಳು ಹಲವರ ಹೃದಯವನ್ನು ಆವರಿಸಿದ್ದ ಸಂದರ್ಭದಲ್ಲೇ ವಿಜ್ಞಾನದ ಬಿರುಗಾಳಿ ಬೀಸಿತು; ಧಾರ್ಮಿಕ ನಂಬಿಕೆಗಳನ್ನೆಲ್ಲ ಧೂಳೀಪಟ ಮಾಡಿತು. ಬೌದ್ಧಿಕ ಪ್ರಾಬಲ್ಯ ಎಲ್ಲವನ್ನೂ ಪ್ರಭಾವಿಸಿದ ಸಮಯದಲ್ಲೇ, ಹೃದಯಶೂನ್ಯವಾದ ವೈಜ್ಞಾನಿಕ ಕ್ರಾಂತಿ ಎಂಥ ಅನರ್ಥಗಳನ್ನು ಸೃಷ್ಟಿಸಬಹುದು ಎಂಬುದನ್ನು ಜಗತ್ತು ಕಂಡಿತು. ಎರಡು ಮಹಾಯುದ್ಧಗಳು, ಕೈಗಾರಿಕಾ ಕ್ರಾಂತಿ, ಅಣುಬಾಂಬುಗಳ ನಿರ್ಮಾಣ ಹಾಗೂ ಅದರ ಪರೀಕ್ಷೆಯ ಪೈಪೋಟಿ - ಇವುಗಳನ್ನು ಬೌದ್ಧಿಕ ಪ್ರಗತಿಯ ಪರಿಣಾಮವೆಂಬುದಾಗಿ ಕಂಡ ಚಿಂತಕರು, 'ಮಾನವನ ಬುದ್ಧಿಯ ಮುಂದೆ ಹೃದಯ ಸೋತಿತೆ?' ಎಂದು ಪ್ರಶ್ನಿಸಿದ್ದಿದೆ. ''ವಿವೇಕದೊಂದಿಗೆ ಸೇರಿಕೊಂಡಿಲ್ಲದ ಜ್ಞಾನ ವಿನಾಶಕಾರಿಯಾಗಬಲ್ಲುದು; ಜ್ಞಾನದ ಅನ್ವೇಷಣೆ ಮಾಡುವ ಬುದ್ಧಿವಂತರಲ್ಲಿ ವಿಶಾಲ ದೃಷ್ಟಿ

ಕೋನದ ವಿವೇಕ ಇರಬೇಕೆಂದೇನೂ ಇಲ್ಲ'' ('*Knowledge and Wisdom*' ಲೇಖನ) ಎಂಬ ಬರ್ಟ್ರಂಡ್ ರಸೆಲ್‌ನ ಮಾತು ಇಲ್ಲಿ ಮುಖ್ಯವೆನಿಸುತ್ತದೆ. ಇದೇ ರೀತಿ ಆರ್ಥಿಕ ಅಸಮಾನತೆ, ಸಾಮಾಜಿಕ ಶ್ರೇಣೀಕರಣ, ಜಾತಿಭೇದ ಹಾಗೂ ಗುಲಾಮಗಿರಿ ಮುಂತಾದ ಪಿಡುಗುಗಳು ಅನೇಕ ಚಿಂತಕರ ಟೀಕೆಗೆ ಗುರಿಯಾಗಿವೆ. ಅನೇಕ ದೇಶಗಳ, ಅದರಲ್ಲೂ ಪ್ರಜಾಪ್ರಭುತ್ವವಿರುವ ದೇಶಗಳ ಸಂವಿಧಾನ ದಲ್ಲಿ ಇಂತಹ ಚಿಂತನೆಗಳ ಪ್ರಭಾವ ದಟ್ಟವಾಗಿರುವುದು ಕಂಡುಬರುತ್ತದೆ. ಇತ್ತೀಚೆಗೆ ಜಾಗತಿಕ ಮಟ್ಟದಲ್ಲಿ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ವಿಶ್ವಸಂಸ್ಥೆಯ ವಿವಿಧ ಚಟುವಟಿಕೆಗಳು ಹಾಗೂ ಸುದ್ದಿಮಾಧ್ಯಮಗಳು ಪ್ರಬಲವಾದ ರೀತಿಯಲ್ಲಿ ಇಂಥ ಅನಾಚಾರಗಳನ್ನು ತಡೆಯುವಲ್ಲಿ ಕಾರ್ಯಪ್ರವೃತ್ತವಾಗಿವೆ.

ಇಷ್ಟೆಲ್ಲ ಗೊಂದಲಗಳ ನಡುವೆ ಕೂಡ ಮಾನವನು ಜ್ಞಾನದ ಮಹತ್ವವನ್ನು ಅರಿತಿದ್ದಾನೆ. ಬುದ್ಧಿಯ ಅಗಾಧ ಸಾಮರ್ಥ್ಯ, ಅದರ ಅಗೋಚರ ಆಯಾಮ, ಅಸಾಧಾರಣ ಸಂಪನ್ನತೆಯನ್ನು ಅವನು ಸದಾ ಪುರಸ್ಕರಿಸುತ್ತ ಬಂದಿದ್ದಾನೆ. ಆದರೆ ದಾರಿತಪ್ಪಿದ ಪ್ರಗತಿ ಹೇಗೆ ಸಮಾಜವನ್ನು ಕ್ರೂರವಾಗಿ ಹಿಂಸಿಸುತ್ತದೆ ಎಂಬುದನ್ನು ನಾವು ನಿತ್ಯ ಕಾಣುತ್ತಿದ್ದೇವೆ. ನಮ್ಮ ವಿದ್ಯಾಭ್ಯಾಸ, ನಾಗರಿಕ ಜನಜೀವನ, ಸರಕಾರ ಹಾಗೂ ಸಾಮಾಜಿಕ ಸಂಘಟನೆಗಳು ಬೆಳೆಯುತ್ತಿರುವ ಎಳೆಯ ಮನಸ್ಸುಗಳನ್ನು ಹಾನಿಕಾರಕ ಬೌದ್ಧಿಕತೆಯತ್ತ ಹೊರಳದಂತೆ ರಕ್ಷಿಸಬೇಕು. ವಿಶ್ವದೆಲ್ಲೆಡೆ ಇಂಥ ಪ್ರಯತ್ನಗಳು ನಡೆಯುತ್ತಿವೆ. ಹೃದಯ ತನ್ನ ನೆಲೆಯನ್ನು ಎಲ್ಲೆಡೆ ವ್ಯಾಪಿಸುವುದು ಹೀಗೆ. ಆದರೆ ಮಾನವನ ಬುದ್ಧಿ ಈ ಎಲ್ಲ ಪ್ರಯತ್ನಗಳನ್ನೂ ಮೀರಿ ವಿನಾಶದತ್ತ ಸಾಗುತ್ತಿದೆ ಎಂಬ ಆತಂಕದ ಧ್ವನಿ ಎಲ್ಲೆಡೆ ಕೇಳಿಬರುತ್ತಿದೆ. ಬುದ್ಧಿ, ಹೃದಯಗಳು ನಿರಂತರ ಸಂಘರ್ಷದಲ್ಲಿ ತೊಡಗಿರುವಂತೆ ಕಾಣಿಸುತ್ತಿದೆ.

ಇಲ್ಲಿ ನಾವು ಗಮನಿಸಬೇಕಾದ ಸಂಗತಿಯೇನೆಂದರೆ, ಬೌದ್ಧಿಕ ಬೆಳವಣಿಗೆಯಲ್ಲೇ ಹೃದಯದ ವಿಕಾಸವೂ ನಡೆಯುತ್ತದೆ ಎಂಬುದನ್ನು. ವಿನಾಶಕಾರಿ ಅಣ್ವಸ್ತ್ರಗಳನ್ನು ಕಂಡು ಹಿಡಿದ ವಿಜ್ಞಾನಿಯೇ, ''ಅಯ್ಯೋ! ಎಂಥ ಅನಾಹುತ ಮಾಡಿಬಿಟ್ಟೆ, ಈ ಸಂಶೋಧನೆಯ ಮೂಲಕ!'' ಎಂದು ಪರಿತಪಿಸಿದನಂತೆ. ಮಹಾಯುದ್ಧಗಳ ಭೀಕರ ಪರಿಣಾಮಗಳನ್ನು ಜಗತ್ತು ಕಂಡಿದೆ. ಅದಾದ ಮೇಲೆ ಇಲ್ಲಿಯತನಕ ಎಷ್ಟು ಯುದ್ಧಗಳಾದವೋ, ಆಗ ಪ್ರತಿಬಾರಿಯೂ ಯುದ್ಧವನ್ನು ನಿಲ್ಲಿಸುವ ಪ್ರಯತ್ನಗಳು ನಡೆದಿವೆ. ಈಚೆಗೆ ವಿಶ್ವಶಾಂತಿ, ದೇಶಗಳೊಳಗಿನ ಸ್ನೇಹ ಸಂಬಂಧಗಳ ಪ್ರಯತ್ನಗಳಿಗೆ ಹೆಚ್ಚಿನ ಮಹತ್ವವಿದೆ. ಇಷ್ಟಾದರೂ, ಮನುಷ್ಯನ ಸಂಘರ್ಷಗಳಿಗೆ ಶಾಶ್ವತ ಪರಿಹಾರ ಅವನ ಆಂತರಿಕ ಪರಿವರ್ತನೆಯಿಂದ ಮಾತ್ರ; ಅದು ಸಾರ್ವತ್ರಿಕ ಹಾಗೂ ಸರ್ವಸಮ್ಮತ ರೀತಿಯಲ್ಲಿ ಪ್ರಚಾರಗೊಂಡಾಗ ಮಾತ್ರ ಬುದ್ಧಿ, ಹೃದಯಗಳು ಸಾಮರಸ್ಯದಿಂದ ಕಾರ್ಯ ನಿರ್ವಹಣೆ ಮಾಡಬಲ್ಲವು ಎಂಬುದನ್ನು ನಾವು ಮರೆಯುವಂತಿಲ್ಲ.

### ಆಧ್ಯಾತ್ಮಿಕ ಜಗತ್ತಿನಲ್ಲಿ

ಆಧ್ಯಾತ್ಮಿಕತೆಯೆಂಬುದು ಮಾನವ ವಿಕಾಸದ ಅತ್ಯುನ್ನತ ಹಂತ. ವಿವಿಧ ಧರ್ಮಗಳ ಮೂಲಕ ಸಮಾಜದಲ್ಲಿ ವ್ಯಾಪಿಸಿಕೊಳ್ಳುವ ಆಧ್ಯಾತ್ಮಿಕ ಆದರ್ಶಗಳು ತತ್ತ್ವಗಳ ರೂಪದಿಂದಲೂ, ಅಸಾಧಾರಣ ವ್ಯಕ್ತಿತ್ವ ಹೊಂದಿರುವ ಮಹಾಪುರುಷರ ರೂಪದಿಂದಲೂ ಜೀವಂತವಾಗಿದ್ದಾಗಲೇ ಅದು ಕ್ರಿಯಾಶೀಲ ಆಧ್ಯಾತ್ಮಿಕತೆಯೆನಿಸಿಕೊಳ್ಳುವುದು. ಧರ್ಮಗಳ ವಿವಿಧ ಆಯಾಮಗಳಲ್ಲಿ ಕೆಲವೊಮ್ಮೆ ಭಾವ ಅಥವಾ ಹೃದಯವೇ ಪ್ರಧಾನವಾಗಿ ಕಂಡುಬರುತ್ತದೆ; ಕೆಲವೊಮ್ಮೆ ಬುದ್ಧಿಯೇ ಪ್ರಧಾನವಾಗಿರುವುದು ಕಂಡುಬರುತ್ತದೆ. ಉದಾಹರಣೆಗೆ, ಭಾರತೀಯ ಧರ್ಮಗಳಲ್ಲಿ ಷಡ್ದರ್ಶನವೇ ಮೊದಲಾದ ತಾತ್ತ್ವಿಕ ಪ್ರಸ್ಥಾನಗಳಲ್ಲಿ ಬೌದ್ಧಿಕ ಚಟುವಟಿಕೆ ಪ್ರಧಾನವಾಗಿ ಕಂಡುಬರುತ್ತದೆ. ಅದೇರೀತಿ ಭಕ್ತಿಪ್ರಧಾನವಾದ ಪಂಥಗಳಲ್ಲಿ ಹೃದಯಕ್ಕೆ ಪ್ರಾಧಾನ್ಯ ಕಂಡುಬರುತ್ತದೆ. ಇದರರ್ಥ ಒಂದೆಡೆ ಇನ್ನೊಂದಂಶ ಇಲ್ಲವೆಂದಲ್ಲ; ಬುದ್ಧಿ ಪ್ರಧಾನವಾಗಿ ಇರುವಲ್ಲಿ ಭಾವದ ಅಂಶಗಳು ಇದ್ದೇ ಇರುತ್ತದೆ, ಆದರೆ ಅವು ಅಪ್ರಧಾನ. ಅದೇ ರೀತಿ ಭಾವಪ್ರಧಾನವಾಗಿರುವಲ್ಲಿ ಬೌದ್ಧಿಕ ಅಂಶಗಳೂ ಗೌಣವಾಗಿಯಾದರೂ ಇರುತ್ತವೆ.

ಹೀಗಿದ್ದರೂ, ಸಾಧನೆಯ ಮಾರ್ಗದ ಪ್ರಶ್ನೆ ಬಂದಾಗ ಬುದ್ಧಿ-ಭಾವಗಳ ಬಿಕ್ಕಟ್ಟು ತಪ್ಪಿದ್ದಲ್ಲ. 'ವಿಚಾರ ಗ್ರಂಥಗಳನ್ನು ಓದಿದರೆ ಭಕ್ತಿ ನಷ್ಟವಾಗಬಹುದು' ಎಂಬ ಮಾತಿನಲ್ಲಿ ಈ ಸಂಘರ್ಷದ ಸೂಚನೆಯಿದೆ. ಭಕ್ತಿಪಂಥದವರು ವಿಚಾರಮಾರ್ಗವನ್ನು ಅಲ್ಲಗಳೆಯುತ್ತಾರೆ; ಜ್ಞಾನಮಾರ್ಗದವರು ಭಕ್ತಿ-ಭಾವಗಳ ಭಾವಾತಿರೇಕವನ್ನು ಹಾಸ್ಯ ಮಾಡುತ್ತಾರೆ. ಆಯಾ ಪಂಥದವರಿಗೆ ತಮ್ಮ ತಮ್ಮ ಆದರ್ಶ, ತತ್ತ್ವಗಳಿಗನುಗುಣವಾಗಿ ಸಾಧನೆ ಮಾಡುವ ಸ್ವಾತಂತ್ರ್ಯ ಆಧ್ಯಾತ್ಮಿಕ ಜಗತ್ತಿನಲ್ಲಿದೆ ನಿಜ; ಆದರೆ ಒಂದು ಪಂಥ ಇನ್ನೊಂದು ಪಂಥವನ್ನು ಪೂರ್ಣ ನಿಷೇಧಿಸುವುದು ಒಳಿತಲ್ಲ. ಭಕ್ತಿಪಂಥಗಳಿಗೆ ಜ್ಞಾನದ ಬೌದ್ಧಿಕ ಬಲ ಅತ್ಯಗತ್ಯ; ಅಂತೆಯೇ ಜ್ಞಾನಮಾರ್ಗವನ್ನು ಅನುಸರಿಸುವವರಿಗೆ ಭಕ್ತಿಯ ಭಾವ ಸೌಂದರ್ಯ ಅತ್ಯಗತ್ಯ. ಮಾನವನಲ್ಲಿ ಈ ಎರಡೂ ಗುಣಗಳು ಸಮರಸಗೊಂಡಾಗಲೇ ಅವನ ಆಧ್ಯಾತ್ಮಿಕತೆ ಪರಿಪೂರ್ಣವಾಗುವುದು. ಸ್ವಾಮಿ ವಿವೇಕಾನಂದರು ಬುದ್ಧಿ, ಹೃದಯ ಇವರೆಡರ ಸಾಮರಸ್ಯವನ್ನು ಸಾಧಿಸಬೇಕು ಎನ್ನುತ್ತಿದ್ದರು. ಹೀಗಿದ್ದರೂ ಅವರು ಒಂದೆಡೆ, ''ಬುದ್ಧಿ ಹಾಗೂ ಹೃದಯಗಳ ನಡುವೆ ಸಂಘರ್ಷ ಬಂದಾಗ ಯಾವಾಗಲೂ ಹೃದಯವನ್ನೇ ಅನುಸರಿಸಿ'' ಎಂದಿದ್ದಾರೆ. ಬಹುಶಃ ಬುದ್ಧಿಗಿಂತ ಹೃದಯವೇ ಹೆಚ್ಚು ದೂರದರ್ಶಿಯೂ, ವಿಶಾಲವೂ ಆದದ್ದರಿಂದ ಅವರು ಹೀಗೆ ಹೇಳಿದ್ದಿರಬೇಕು.

ಆಧ್ಯಾತ್ಮಿಕ ಮಹಾಪುರುಷರಲ್ಲೆಲ್ಲ ಬುದ್ಧಿ, ಹೃದಯಗಳ ಅದ್ಭುತ ಸಮನ್ವಯ ಕಂಡುಬರುತ್ತದೆ. ಶ್ರೀಕೃಷ್ಣ, ಬುದ್ಧ, ಶಂಕರ, ಚೈತನ್ಯ, ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು - ಇವರಲ್ಲೆಲ್ಲ ಬುದ್ಧಿ, ಹೃದಯಗಳು ಸಮಾನವಾಗಿ ಪ್ರವೃತ್ತವಾಗಿದ್ದುದನ್ನು ನಾವು ಕಾಣುತ್ತೇವೆ. ವ್ಯಕ್ತಿಯ ವಿಕಾಸ ಹಾಗೂ ಮಾನವ ಜನಾಂಗದ ವಿಕಾಸ ಎರಡೂ ಸಾಧ್ಯವಾಗುವುದು ಇಂಥ ಮಹಾವ್ಯಕ್ತಿಗಳ ಹೆಜ್ಜೆಗುರುತನ್ನು ಅನುಸರಿಸಿ ನಡೆಯುವುದರಿಂದ. ಬುದ್ಧಿಗೆ ಹೃದಯದ ಕಡಿವಾಣ, ಅಂತೆಯೇ ಹೃದಯಕ್ಕೇ ಜ್ಞಾನದ ಬೆನ್ನೆಲುಬು—ಇದೇ ಅಗತ್ಯವಾಗಿ ನಾವೆಲ್ಲ ಕಂಡುಕೊಳ್ಳಬೇಕಾದ ಆದರ್ಶ.